Acknowledgement

## ಮನದಾಳದ ಮಾತು


ಸ್ನಾತಕೋತ್ತರ ಪದವಿ ಮುಗಿದ ನಂತರ ಮುಂದೇನು? ಎಂಬ ಪ್ರಶ್ನೆ ಉದ್ಭವಿಸಿದಾಗ ಥಟ್ಟನೆ ನೆನಪಿಗೆ ಬಂದದ್ದು ಸಂಶೋಧನೆಯನ್ನು ಕೈಗೊಳ್ಳಬೇಕೆಂಬುದು. ಆಗ ಕನ್ನಡ ಅಧ್ಯಯನ ಪೀಠದ ಎಲ್ಲ ಪ್ರಾಧ್ಯಾಪಕರ ಹತ್ತಿರ ವಿಚಾರಿಸಿದಾಗ ಯಾರ ಬಳಿಯೂ ಸೀಟುಗಳು ಇಲ್ಲ ಎಂಬ ಉತ್ತರ. ಇಂತಹ ಸಂದರ್ಭದಲ್ಲಿ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಲಿಂಗರಾಜ ಕಾಲೇಜಿನ ಅಂದಿನ ಪ್ರಾಚಾರ್ಯರಾದ ಡಾ.ಬಸವರಾಜ ಜಗಜಂಪಿಯವರ ಬಳಿ ನನ್ನ ಮನದ ಮಾತನ್ನು ಹೇಳಿದಾಗ ಆಯ್ತು, ಅವಕಾಶ ಕೊಡುತ್ತೇನೆಂಬ ಉತ್ತರ. ಮುಂದೆ ಅವರು ನನಗೆ ಮಾರ್ಗದರ್ಶಕರಾಗಿ ಒಪ್ಪಿಗೆ ಸೂಚಿಸಿ ಅವಕಾಶ ಕಲ್ಪಿಸಿದರು. ಅವರೆ ಇನ್ನೊಂದು ವಿಷಯವೆನೆಂದರೆ ಯಾವ ವಿಷಯವನ್ನಿಟ್ಟುಕೊಂಡು ಸಂಶೊದನೆ ಕೈಗೊಳ್ಳುವೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಸರ್ ನಮ್ಮ ರಾಜ್ಯದಲ್ಲಿ ಅಷ್ಟೆ ಅಲ್ಲದೆ ದೇಶ ವಿದೇಶಗಳಲ್ಲಿ ಶಿಕ್ಷಣ ಪ್ರವಾಸದ ಜೊತೆಗೆ ಸಾಮಾಜಿಕ ಕಾಳಜಿ ವಹಿಸುತ್ತಿರುವ ಕೆ.ಎಲ್.ಇ. ಸಂಸ್ಥೆಯ ಬಗ್ಗೆ ಸಮಗ್ರ ಅಧ್ಯಯನ ಮಾಡಬೇಕೆಂದಿರುವೆ ಎಂದಾಗ ಅವರು ಯೋಚಿಸಿ ೯೫ ವರ್ಷಗಳ ಇತಿಹಾಸವಿರುವ ಕೆ.ಎಲ್.ಇ. ಸಂಸ್ಥೆಯ ಸಮಗ್ರ ಅಧ್ಯಯನ ಅವಶ್ಯಕತೆ ಇದೆ ಎಂದು ಹೇಳುತ್ತಾ ಸಮ್ಮತಿಸಿದರು. ಈ ವಿಷಯವನ್ನೆ ತೆಗೆದುಕೊಂಡು ಅಧ್ಯಯನ ಪ್ರಾರಂಭಿಸಿದೆ. ಈ ಅವಕಾಶವನ್ನು ಕೊಟ್ಟು ಇಂದಿನವರೆಗೆ ನನಗೆ ಪ್ರೀತಿಯ ಮಾತುಗಳನ್ನಾಡುತ್ತ ಬೆಂಬಲಿಸುತ್ತಿರುವ ಡಾ. ಬಸವರಾಜ ಜಗಜಂಪಿ ಗುರುಗಳಿಗೆ ಪ್ರೀತಿಪೂರ್ವಕ ಕೃತಜ್ಞತೆಗಳು.

ಇದೇ ಸಂದರ್ಭದಲ್ಲಿ ಯು.ಜಿ.ಸಿ.ಯಿಂದ ಕೊಡಮಾಡಲ್ಪಡುವ ಸಾಮಾನ್ಯ ವರ್ಗದ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನಕ್ಕೆ ಆಯ್ಕೆಯಾದ ನನಗೆ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ವಿಭಾಗದ ಮಾರ್ಗದರ್ಶಕರಲ್ಲಿ ಸಂಶೋಧನೆಯ ಜೊತೆಗೆ ಹಾಜರಾತಿ ಕಡ್ಡಾಯವಾದ್ದರಿಂದ ಅಧ್ಯಯನ ಮಾಡಬೇಕೆಂಬ ನಿರ್ದೇಶನದ ಮೇರೆಗೆ ಅನಿವಾರ್ಯವಾಗಿ ಮಾರ್ಗದಶಕರನ್ನು ಬದಲಾಯಿಸುವ ಸಂದರ್ಭ ಬಂದಾಗ ಅಂದಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಎ.ಮುರಿಗೆಪ್ಪನವರ ಸಹಕಾರದ ಮೆರೆಗೆ ಡಾ.ಬಿ.ಬಿ.ಬಿರಾದಾರ ಗುರುಗಳ ಕಡೆಗೆ ಅವಕಾಶ ಒದಗಿ ಬಂದಿತು. ಇಂತಹ ಸಂದರ್ಭದಲ್ಲಿ ನನಗೆ ಅವಕಾಶ ಕಲ್ಪಿಸಿ ಅಂದಿನಿಂದ ಇಂದಿನ ವರೆಗೆ ಅಧ್ಯಯನದ ಜೊತೆಗೆ ನಾನು ಮಾಡುವ ತಪ್ಪುಗಳನ್ನು ತಿದ್ದುತ್ತಾ ಸದಾ ನನ್ನ ಏಳಿಗೆಯನ್ನೆ ಬಯಸುತ್ತಿರುವ ನನ್ನ ಮಾರ್ಗದರ್ಶಕರಾದ ಡಾ.ಬಿ.ಬಿ.ಬಿರಾದಾರ ಹಾಗೂ ಸಹಕಾರ ನೀಡಿದ ಕನ್ನಡ ವಿ.ವಿ. ಕುಲಪತಿ ಡಾ.ಎ.ಮುರಿಗೆಪ್ಪನವರಿಗೆ ಹೃದಯಪೂರ್ವಕ ಕೃತಜ್ಞತೆಗಳು.

ನಾನು ಸ್ನಾತಕೋತ್ತರ ವ್ಯಾಸಾಂಗ ಮಾಡುತ್ತಿದ್ದ ಸಂದರ್ಭದಿಂದಲೂ ಒಳ್ಳೆಯ ಕೆಲಸ ಕಾರ್ಯವನ್ನು ಪ್ರೋತ್ಸಾಹಿಸುತ್ತಾ ತಪ್ಪು ಮಾಡಿದಾಗ ತಿದ್ದಿ ಹೇಳುತ್ತಾ ಇಂದಿನವರೆಗೂ ನನಗೆ, ಅಣ್ಣನ ಪ್ರೀತಿ ಹಾಗೂ ನನ್ನ ಶೈಕ್ಷಣಿಕ ಜೀವನದ ಮಾರ್ಗದರ್ಶಕರಾಗಿ ಬೆಳೆಸುತ್ತಿರುವ ಜನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ವ್ಹಿ.ಎಲ್.ಪಾಟೀಲ ಗುರುಗಳಿಗೆ ಮನಪೂರ್ವಕವಾದ ಕೃತಜ್ಞತೆಗಳು. ಡಾ.ಶಾಲಿನಿ ರಘುನಾಥ ಹಾಗೂ ಡಾ.ವಾಯ್.ಎಫ್.ಸೈದಾಪೂರ ಗುರುಗಳಿಗೂ ನನ್ನ ಕೃತಜ್ಞತೆಗಳು.

ನನ್ನ ವಿದ್ಯಾಗುರುಗಳಾದಂತಹ ಡಾ. ದಿ. ಬಿ.ಆರ್. ಹಿರೇಮಠ, ಡಾ.ಎಚ್.ಎಂ. ಮಹೇಶ್ವರಯ್ಯ, ಡಾ.ಕೆ.ಆರ್. ದುರ್ಗಾದಾಸ, ಡಾ.ಅಯ್ಯನಗೌಡ, ಡಾ.(ಶ್ರೀಮತಿ) ಮದುವೆಂಕಾರೆಡ್ಡಿ, ಡಾ.(ಶ್ರೀಮತಿ) ಎಸ್.ಎಲ್. ಸಣ್ಣೇಲ್ಲಪ್ಪನವರ, ಡಾ.(ಶ್ರೀಮತಿ)ಶಾಂತಾ ಇಮ್ರಾಪೂರ, ಡಾ.(ಶ್ರೀಮತಿ)ಚೆನ್ನಕ್ಕಾ ಪಾವಟೆ, ಡಾ.ಎನ್.ವಾಯ್.ಮಟ್ಟಿಹಾಳ್, ಡಾ.ಶಾಂತಿನಾಥ ದಿಬ್ಬದ, ಡಾ.ಜೆ.ಎಂ.ನಾಗಯ್ಯಾ, ಹಾಗೂ ನಿವೃತ ಪ್ರಾಧ್ಯಾಪಕರಾದ ಡಾ.ವೀರಣ್ಣ ರಾಜೂರ, ಡಾ.ಬಿ.ವ್ಹಿ.ಯಕ್ಕುಂಡಿಮಠರವರು ಅಧ್ಯಯನದುದ್ದಕ್ಕೂ ಸಲಹೆ ಸೂಚನೆ ನೀಡಿ ಸಹಕರಿಸಿದ ಇವರಿಗೆ ನಾನು ಆಭಾರಿಯಾಗಿದ್ದೇನೆ.

ಅಧ್ಯಯನ ವಿಭಾಗದ ಗ್ರಂಥಪಾಲರಾಗಿರುವ ಸ್ನೇಹಿತರಾದ ಡಾ.ಕೆ.ಮಲ್ಲಿಕಾರ್ಜುನ ಜೊತೆಗೆ ಕಾಡಸಿದ್ದೇಶ್ವರ ಕಾಲೇಜಿನ ಗ್ರಂಥಪಾಲಕರಾದ ಶ್ರೀ.ವ್ಹಿ.ಎಸ್.ಮಾಳವಾಡ, ಶ್ರೀ.ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯದ ಗ್ರಂಥಪಾಲಕರಾದ ಶ್ರೀ.ಸಿ.ವ್ಹಿ.ಓಂಕಾರಿ ಯವರಿಗೆ ಹಾಗೂ ಕೆ.ಎಲ್.ಇ. ಸಂಸ್ಥೆಯ ಎಲ್ಲಾ ಗ್ರಂಥಪಾಲಕರಿಗೂ ನನ್ನ ನಮನಗಳು.

ಕೆ.ಎಲ್.ಇ. ಸಂಸ್ಥೆಯ ಶ್ರೀ ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಆನಂದ ಮುಳಗುಂದ, ಪದವಿ ಪೂರ್ವ ಪ್ರಾಚಾರ್ಯರಾದ ಶ್ರೀ ಎಸ್. ಎ. ಗನಿ, ಹಾಗೂ ನನ್ನ ಪ್ರೀತಿಯ ಸಹೋದ್ಯೋಗಿಗಳಾದ ಪ್ರೊ. ಎ.ಎ. ಕೊಂಕಣಿ, ಪ್ರೊ. ಎಚ್. ಸೋಮಶೇಖರ, ಪ್ರೊ. (ಶ್ರೀಮತಿ) ಪವಿತ್ರಾ ಬಶೆಟ್ಟಿ, ಪ್ರೊ. ದೀಪಾ ನಂದಿಕೋಳಮಠ, ನನ್ನ ಆತ್ಮೀಯ ಸಹೋದರ ಸಿದ್ದು ಸೂಡಿ, ಪ್ರೊ. ದೇವದಾಸ, ಪ್ರೊ. ಸದಾಶಿವ, ಪ್ರೊ. ಎಂ.ಎನ್. ಜೋಶಿ, ಪ್ರೊ. ಬಸವರಾಜ, ಪ್ರೊ. ಮೋದಿನ ಹುಲಗೂರ ರವರಿಗೆ ನನ್ನ ಧನ್ಯವಾದಗಳು.

ನನ್ನ ಅಧ್ಯಯನದುದ್ದಕ್ಕೂ ಸಲಹೆ ಸಹಕಾರ ನೀಡಿದ ನನ್ನ ಸ್ನೇಹಿತರಾದ ಡಾ. ಬಸವರಾಜ ಎಸ್.ಜಿ., ಶ್ರೀ ಪರಶುರಾಮ ಮುಕಾರಿ, ಶ್ರೀ ಆನಂದ ಜಕ್ಕಣ್ಣವರ, ಸಂಗಯ್ಯ ಶಿವಪ್ಪಯ್ಯನಮಠ, ಮುತ್ತುರಾಜ ಚೌಕಾ, ಅವರಿಗೂ ಕೃತಜ್ಞತೆಗಳು. ಪ್ರೀತಿಯ ಮಾತುಗಳಿಂದ ನನ್ನನ್ನು ತಿದ್ದಿ ತೀಡಿ ಸಂಶೋಧನಾತ್ಮಕ ಕಲೆಯನ್ನು ಅಳವಡಿಸಿಕೊಳ್ಳುವಂತಹ ಸಲಹೆ ನೀಡುತ್ತಾ ಇರುವ ನನ್ನ ಪ್ರೀತಿಯ ಶೋಭಾಲಕ್ಷ್ಮಿ ನಾಯಕ ಇವಳಿಗೆ ಪ್ರೀತಿಪೂರ್ವಕ ಕೃತಜ್ಞತೆಗಳು.

ಅಂದವಾಗಿ ಬೆರಳಚ್ಚು ಕಾರ್ಯ ಮಾಡಿಕೊಟ್ಟ ಶ್ರೀ ಮಹಾಗಣಪತಿ ಕಂಪ್ಯೂಟರ್ಸ್ ಹಾಗೂ ಬೈಂಡಿಂಗ್ ಕಾರ್ಯ ನೆರವೇರಿಸಿದ ಶ್ರೀ ಡಿ.ಬಿ. ಬಿರಾದಾರ ಅವರಿಗೂ ಕೃತಜ್ಞತೆಗಳು.

ನನ್ನ ಜೀವನ ತಮ್ಮ ಸಂಪತ್ತೆಂದು ಸದಾ ನನ್ನ ಜೀವನದ ಏಳ್ಗೇಯನ್ನು ಬಯಸುತ್ತಿರುವ ನನ್ನ ಪ್ರೀತಿಯ ವಿಶ್ರಾಂತ ಪ್ರಾಧ್ಯಾಪಕರಾಗಿರುವ ತಂದೆಯವರಾದ ಶ್ರೀ.ಮಲ್ಲಿಕಾರ್ಜುನ ಹಾಗೂ ತಾಯಿಯವರಾದ ಅನ್ನಪೂರ್ಣ, ಸಹೋದರರಾದ ಶ್ರೀಶೈಲ, ಬಸವರಾಜ, ಶಿವಾನಂದ, ಸಹೋದರಿಯರಾದ ಶ್ರೀಮತಿ.ಶಕುಂತಲಾ, ಶ್ರೀಮತಿ.ಭಾಗಿರತಿ, ಶ್ರೀಮತಿ.ದಿ. ಸರೂಜಿನಿ, ಸಾವಿತ್ರಿ ಅಲ್ಲದೇ ಪ್ರೀತಿಯ ತಂಗಿ ಶ್ರೀಮತಿ.ಇಂದುಮತಿ. ಹಾಗೂ ನನ್ನ ಎಲ್ಲ ಮಾವಂದಿರಿಗೂ ನನ್ನ ನಮಸ್ಕಾರಗಳು.